



ಅಂದರೆ ಚಪ್ಪೆಯ(ಹಿಪ್) ಭಾಗದ ಮೂಳೆಯನ್ನು ತೆಗೆದು ಸವೆದ ಮೂಳೆಯ ಜಾಗದಲ್ಲಿ ತುಂಬಿದರೆ ಸರಿಯಾಗುತ್ತದೆ. ಇದಕ್ಕೆ ಒಂದಿಷ್ಟು ದೀರ್ಘ ಕಾಲದ ವಿಶ್ರಾಂತಿ ಬೇಕಾಗುತ್ತದೆ' ಎಂದು ಹೇಳುತ್ತಾರೆ ಕೊಪ್ಪಳದ ಮೂಳೆ ತಜ್ಞ ಡಾ. ಎಸ್. ಸಿ. ಹಿರೇಮಠ.

ಮೂಳೆಯ ಕ್ಯಾನ್ಸರ್‌ನಲ್ಲಿಯೇ ಮತ್ತೊಂದು ಬಗೆ ಇದೆ. ಅದನ್ನು ಆಸ್ಟಿಯೋಬ್ಲಾಸ್ಟೋಮಾ **(Osteoblastoma)** ಎಂದು ಕರೆಯಲಾಗುತ್ತದೆ. ಅದರ ಲಕ್ಷಣ ಎಂದರೆ, ಮೂಳೆಗಳು ಹೆಚ್ಚುವರಿ ಬೆಳವಣಿಗೆಯಾಗುತ್ತವೆ. ಇದು ಅತ್ಯಂತ ಅಪಾಯಕಾರಿಯಾಗಿದ್ದು ಮಾರಣಾಂತಿಕ ಕೂಡ ಹೌದು ಎಂದು ಹಿರೇಮಠ ಹೇಳುತ್ತಾರೆ. ರಮ್ಯಾ ಅವರಿಗೆ ಬಂದಿದೆ ಎನ್ನಲಾದ ಆಸ್ಟಿಯೋಕ್ಲಾಸ್ಟೋಮಾ ರೋಗವನ್ನು ಸುಲಭವಾಗಿ ಗುಣಪಡಿಸಬಹುದು ಎನ್ನುವುದು ಅವರ ಅಭಿಪ್ರಾಯ.

ಎರಡು ಮೂಳೆಗಳು ಸೇರುವ ಸಂಧಿಯ ಗಂಟಿನ ಮೇಲೆ ಆಸ್ಟಿಯೋಕ್ಲಾಸ್ಟೋಮಾ ದಾಳಿ ಮಾಡುತ್ತದೆ. ಕಾಯಿಲೆ ಬಂದರೆ ಓಡಾಡಲು ಅಸಾಧ್ಯ ಎನ್ನುವಷ್ಟು ನೋವು ಕಾಡುತ್ತದೆ. ಕಾಯಿಲೆಗೆ ತುತ್ತಾದ ದೇಹದ ಭಾಗವನ್ನು ಅಲುಗಾಡಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಪರಿಹಾರೋಪಾಯ ಶಸ್ತ್ರಚಿಕಿತ್ಸೆ. ಇದು ಮಾರಣಾಂತಿಕ ಅಲ್ಲದಿದ್ದರೂ ಭೀಕರ ನೋವನ್ನು ನೀಡಿ ಹಿಂಸಿಸುತ್ತದೆ. ಗುಣಮುಖರಾದ ನಂತರವೂ ಮತ್ತೆ ರೋಗ ಲಕ್ಷಣಗಳು ಮರುಕಳಿಸುವ ಸಾಧ್ಯತೆಯೂ ಇದೆ. ಆಗಲೂ ಶಸ್ತ್ರಚಿಕಿತ್ಸೆಯೇ ಅದಕ್ಕಿರುವ ಏಕೈಕ ಪರಿಹಾರ.

ಕೆಲವು ದಿನಗಳ ಹಿಂದೆಯೇ ರಮ್ಯಾ ತಮ್ಮ ನೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೊಂಡಿದ್ದರು. 'ನನ್ನ ಪಾದ ಕ್ಯಾನ್ಸರ್‌ಗೆ ತುತ್ತಾಗಿತ್ತು. ಶಸ್ತ್ರಚಿಕಿತ್ಸೆ ಮಾಡಿಸಿ ಈಗ ಗುಣವಾಗುತ್ತಿದ್ದೇನೆ. ಮೂಳೆಯಲ್ಲಿ ನೋವು ಕಾಣಿಸಿಕೊಂಡರೆ ಉದಾಸೀನ ಮಾಡಬೇಡಿ. ಕೂಡಲೇ ತಜ್ಞವೈದ್ಯರನ್ನು ಭೇಟಿ ಮಾಡಿ' ಎನ್ನುವ ಎಚ್ಚರಿಕೆಯ ಸಲಹೆಯನ್ನು ಅವರು ನೀಡಿದ್ದರು. ಜೊತೆಗೆ ತಮ್ಮ ಪಾದದ ಚಿತ್ರವನ್ನೂ ಪ್ರಕಟಿಸಿದ್ದರು.

ರೋಗಕ್ಕೆ ನಿರ್ದಿಷ್ಟ ಕಾರಣಗಳು ಎಂಬುವುದಿಲ್ಲ. ಅಪರೂಪದ ಕಾಯಿಲೆ ಆಗಿದ್ದರೂ ಯಾವ ಸಂದರ್ಭದಲ್ಲಾದರೂ ಯಾರಿಗಾದರೂ ಬರಬಹುದು. ಬಂದಿದ್ದೇ ಆದರೆ ಅದರ ಆಕ್ರಮಣ ಮೂಳೆಯ ತುದಿ ಅಥವಾ ಬುಡದ ಗಂಟಿನಮೇಲೆ ಆಗುತ್ತದೆ. ಅದರಿಂದ ಮೂಳೆ ದುರ್ಬಲವಾಗುತ್ತದೆ. ಕ್ರಮೇಣ ಸವೆಯುತ್ತಾ ಹೋಗುತ್ತದೆ. ಅದರ ಸೂಚನೆ ನೋವಿನಿಂದಲೇ ಗೊತ್ತಾಗುತ್ತದೆ. ಎಲ್ಲಾ ನೋವು ಅದೇ ಎಂದು ಕಲ್ಪಿಸಿಕೊಳ್ಳುವ ಅಗತ್ಯ ಇಲ್ಲ. ದೀರ್ಘಕಾಲ ನೋವು ಕಾಡುತ್ತಿದ್ದು ಯಾವ ಚಿಕಿತ್ಸೆಗೂ ಬಗ್ಗುತ್ತಿಲ್ಲ ಎನ್ನುವುದು ಖಾತ್ರಿಯಾದ ಕೂಡಲೇ ಸೂಕ್ತ ವೈದ್ಯರನ್ನು ಭೇಟಿ ಮಾಡುವುದರಿಂದ. ಅದರ ವಿಸ್ತರಣೆಗೆ ಕಡಿವಾಣ ಹಾಕುವ ಜೊತೆಗೆ ಬೇಗ ಗುಣಮುಖರಾಗಲು ಸಹಾಯವಾಗುತ್ತದೆ ಎನ್ನುವುದು ವೈದ್ಯರ ಸಲಹೆ.

